# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :13 ಫ್ರಾ.ಸಾ. : 10**

| | | |
|---|---|---|
| ಸಾಕ್ಷಿಯ ಹೆಸರು | : | ರವಿತೇಜ್ ಸುಬ್ರಾಯ ನಾಯಕ್ |
| ತಂದೆಯ ಹೆಸರು | : | ಸುಬ್ರಾಯ ನಾಯಕ್ |
| ವಯಸ್ಸು | : | 34 ವರ್ಷ |
| ಕೆಲಸ | : | ಹೋಟೆಲ್ ವ್ಯವಹಾರ |
| ವಾಸ | : | ಬಾವಿಕೇರಿ, ಅಂಕೋಲ |

**ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1, 4 ರಿಂದ 7 ಮತ್ತು 14 ನಮ್ಮ ಕೇರಿಯವರು. ಈ ಪ್ರಕರಣದ ಆರೋಪಿಯು ನನಗೆ ಗೊತ್ತು. ದಿ.24-01-2017 ರಂದು ನಾವು ಮನೆಯಲ್ಲಿ ಮಲಗಿದ್ದಾಗ, ಮಧ್ಯ ರಾತ್ರಿ 01.00 ಗಂಟೆ ಸಮಯದಲ್ಲಿ ಚಾಸಾ-7 ರವರ ಮನೆಯ ಹತ್ತಿರ ಬೊಬ್ಬೆಯಾಗುತ್ತಿರುವುದನ್ನು ಕೇಳಿ, ನಾನು ಚಾಸಾ-7 ರವರ ಮನೆಯ ಹತ್ತಿರ ಹೋಗಿ ನೋಡಿದಾಗ, ಅಲ್ಲಿ ಚಾಸಾ-1, 4 ಮತ್ತು 14 ರವರು ಮನೆಯ ಒಳಗೆ ಬೊಬ್ಬೆ ಹಾಕುತ್ತಿದ್ದರು ಹಾಗೂ ಗಾಬರಿಗೊಂಡಿದ್ದರು. ಆ ಸಮಯದಲ್ಲಿ ಅಲ್ಲಿಗೆ ಚಾಸಾ-8 ರಿಂದ 12 ರವರು ಬಂದಿದ್ದರು ಮತ್ತು ಚಾಸಾ-5 ಮತ್ತು 6 ರವರೂ ಸಹ ಬಂದಿದ್ದರು. ಆಗ ನಾವು ಚಾಸಾ-1 ರವರನ್ನು ಏನಾಯಿತು ಎಂದು ವಿಚಾರಿಸಿದಾಗ "ಈ ದಿನ ರಾತ್ರಿ ಚಾಸಾ-4 ರವರು ಮನೆಯ ಹಾಲ್ ನಲ್ಲಿ ಮಲಗಿದ್ದು, ನಾನು ಹಾಗೂ ನನ್ನ ಮಗ ಚಾಸಾ-14 ಮನೆಯ ಬೆಡ್ ರೂಮಿನಲ್ಲಿ ಮಲಗಿದ್ದೆವು, ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ, ಮನೆಯ ಹಿಂದಿನ ಬಾಗಿಲನ್ನು ಯಾರೋ ಬಡಿಯುತ್ತಿದ್ದನ್ನು ಕೇಳಿ, ನಾವು ಎಚ್ಚರಗೊಂಡು ಬಾಗಿಲು ತೆಗೆದು ನೋಡಿದಾಗ, ಬಾಗಿಲು ಬಡಿದ ವ್ಯಕ್ತಿ ನನ್ನ ಗಂಡನ ಸ್ನೇಹಿತನಾದ ನಾರಾಯಣ ರಾಮಚಂದ್ರ ನಾಯಕ ಆಗಿದ್ದು, ಆತನಿಗೆ ನಾನು 'ನೀನು ಇಷ್ಟು ರಾತ್ರಿಯಲ್ಲಿ ಏಕೆ ನಮ್ಮ ಮನೆಗೆ ಬಂದೆ' ಎಂದು ಕೇಳಿದಾಗ, ಆತ

ಒಮ್ಮೆಲೇ ನಮ್ಮ ಮನೆಯ ಒಳಗೆ ನುಗ್ಗಿ ಬಂದು, ನನ್ನನ್ನು ಅಪ್ಪಿಕೊಂಡು, ರೂಮಿನ ಒಳಗೆ ಎಳೆದುಕೊಂಡ ಹೋಗಿ, ರೂಮಿನ ಬಾಗಿಲನ್ನು ಹಾಕಿಕೊಂಡು, 'ನೀನು ನನಗೆ ಬೇಕೆ ಬೇಕು, ನೀನಾಗೆ ಒಪ್ಪಿದರೆ ಸರಿ, ಇಲ್ಲದಿದ್ದರೆ ನಾನು ನಿನ್ನನ್ನು ಬಲಾತ್ಕರಿಸಿಯಾದರೂ ಪಡೆಯದೆ ಬಿಡುವುದಿಲ್ಲ', ಅಂತ ಹೇಳಿ, ನಾನು ಹಾಕಿಕೊಂಡಿದ್ದ ಚೂಡಿದಾರವನ್ನು ಎಳೆಯಲು ಪ್ರಯತ್ನಿಸಿದ ಹಾಗೂ ಚೂಡಿದಾರದ ಒಳಗೆ ಕೈ ಹಾಕಿ, ನಾನು ಹಾಕಿದ ಚಡ್ಡಿಯನ್ನು ಎಳೆಯಲು ನೋಡಿದನು, ಆಗ ನಾನು ಬೊಬ್ಬೆ ಹಾಕಿಕೊಂಡು, ಆತನಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದು, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡು ಓಡುತ್ತಿದ್ದಾಗ, ಆರೋಪಿಯು ನನ್ನನ್ನು ಹಿಡಿಯಲು ಹಿಂದಿನಿಂದ ಓಡಿ ಬಂದಿದ್ದು, ನಾನು ಬಾಗಿಲು ಹಾಕಿಕೊಳ್ಳದಂತೆ ಹಿಡಿದುಕೊಂಡಿದ್ದು, ಆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಆರೋಪಿಯ ತಲೆಗೆ ತಾಗಿ, ರಕ್ತ ಬಂದಿರುತ್ತದೆ, ನಂತರ ತಕ್ಷಣ ನಾನು ಆರೋಪಿಯಿಂದ ತಪ್ಪಿಸಿಕೊಂಡು, ಆತನಿಗೆ ಒಳಗೆ ದೂಡಿ, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡೆನು ಹಾಗೂ ನನ್ನ ಅತ್ತೆ ಮನೆಯ ಮುಂದಿನ ಬಾಗಿಲನ್ನು ಹಾಕಿಕೊಂಡರು, ಆ ಸಮಯದಲ್ಲಿ ನನ್ನ ಮಗನೂ ಸಹ ಕೂಗಿಕೊಳ್ಳುತ್ತಾ ಓಡಿ ಬಂದನು" ಎಂದು ತಿಳಿಸಿರುತ್ತಾರೆ. ನಂತರ ನಾವು ಹಾಗೂ ಕೇರಿಯ ಜನರೆಲ್ಲರೂ ಸೇರಿ ಮನೆಯ ಒಳಗೆ ಕೂಡಿ ಹಾಕಿದ್ದ ಆರೋಪಿಯನ್ನು ಹಿಡಿದು ಹೊರಗೆ ಕರೆದುಕೊಂಡು ಬಂದೆವು. ನಂತರ ಬೆಳಿಗ್ಗೆ ಚಾಸಾ-7 ರವರು ಕೆಲಸದಿಂದ ಬಂದ ನಂತರ ಅವರಿಗೆ ವಿಷಯ ತಿಳಿಸಿ, ಚಾಸಾ-1 ರವರು ಆರೋಪಿತನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ನಾನು ಈ ವಿಷಯದ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ